# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ರೋ/ರೇಂ.ಶಿಬಿರ-120/2026-27 - 1216 ದಿನಾಂಕ: 08.10.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ, ಕರ್ನಾಟಕ.

**ಮಾನ್ಯರೆ,**

ವಿಷಯ:- ರಾಜ್ಯ ಮಟ್ಟದ ಹೈನುಗಾರಿಕೆಯಲ್ಲಿ ಸ್ವಯಂ ಉದ್ಯೋಗ, ಸಿರಿಧಾನ್ಯಗಳ ಮಾಹಿತಿ ಶಿಬಿರಕ್ಕೆ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ಕೋರಿ.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಚಿತ್ರದುರ್ಗ ಜಿಲ್ಲಾ ಸಂಸ್ಥೆ ಮತ್ತು ಹೊಸದುರ್ಗ ಸ್ಥಳೀಯ ಸಂಸ್ಥೆಯ ಸಹಯೋಗದಲ್ಲಿ ರಾಜ್ಯ ಮಟ್ಟದ ಹೈನುಗಾರಿಕೆಯಲ್ಲಿ ಸ್ವಯಂ ಉದ್ಯೋಗ, ಸಿರಿಧಾನ್ಯಗಳ ಮಾಹಿತಿ ಶಿಬಿರವನ್ನು ದಿನಾಂಕ: 03.11.2026 ರಿಂದ 07.11.2026 ರವರೆಗೆ ಶ್ರೀ ತರಳಬಾಳು ಜಗದ್ಗುರು ಶಾಖಾ, ಶ್ರೀಮಠ ಸಾಣೆಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರಾಜ್ಯ ಮಟ್ಟದ ಹೈನುಗಾರಿಕೆಯಲ್ಲಿ ಸ್ವಯಂ ಉದ್ಯೋಗ, ಸಿರಿಧಾನ್ಯಗಳ ಮಾಹಿತಿ ಶಿಬಿರ |
| ದಿನಾಂಕ | 03.11.2026 ರಿಂದ 07.11.2026 ರವರೆಗೆ |
| ಸ್ಥಳ | ಶ್ರೀ ತರಳಬಾಳು ಜಗದ್ಗುರು ಶಾಖಾ, ಶ್ರೀಮಠ ಸಾಣೆಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| ನೊಂದಾವಣಿ ದಿನಾಂಕ | 02.11.2026 ರಂದು ಸಂಜೆ 4.00 ಗಂಟೆಗೆ ಶಿಬಿರ ಸ್ಥಳದಲ್ಲಿ ಹಾಜರಾಗುವುದು. |
| ನೊಂದಣಿ & ಶಿಬಿರ ಶುಲ್ಕ | ನೊಂದಣಿ ಮತ್ತು ಶಿಬಿರ ಶುಲ್ಕ ರೂ.300/- |
| ಬಿಡುಗಡೆ ದಿನಾಂಕ | 07.11.2026 ರಂದು ಮಧ್ಯಾಹ್ನ 1.00 ಗಂಟೆಗೆ ಬಿಡುಗಡೆಗೊಳಿಸಲಾಗುವುದು. |
| ಯಾರು ಭಾಗವಹಿಸುವುದು. | ಪ್ರತಿ ಜಿಲ್ಲೆಯಿಂದ 4 ರೋವರ್ಸ್ ಮತ್ತು 4 ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿರುತ್ತದೆ. |
| ಶಿಬಿರದ ವಿಶೇಷತೆ | ಶಿಬಿರದಲ್ಲಿ ಹೈನುಗಾರಿಕೆಯ ಬಗ್ಗೆ ಪ್ರಗತಿ ಪರ ರೈತರಿಂದ ಮಾಹಿತಿ ಮತ್ತು ಪ್ರಾತ್ಯೇಕ್ಷಿಕತೆ, ಇದರಿಂದ ಸ್ವಯಂ ಉದ್ಯೋಗ ನಡೆಸುವ ಬಗ್ಗೆ, ಸಿರಿಧಾನ್ಯಗಳ ಮಾಹಿತಿ ಮತ್ತು ಉಪಯೋಗ, ರಾಷ್ಟ್ರೀಯ ನಾಟಕೋತ್ಸವವನ್ನು ವೀಕ್ಷಿಸುವುದು ಮತ್ತು ಸೇವೆ ಸಲ್ಲಿಸುವ ಅವಕಾಶ ಯುವಕರಿಗೆ ದೊರೆಯುತ್ತದೆ. |

| | |
|---|---|
| ಪ್ರಯಾಣ ವೆಚ್ಚ | ತಮ್ಮ ಸ್ಥಳದಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚ ಮತ್ತು ಶಿಬಿರ ಶುಲ್ಕವನ್ನು ಆಯಾಯ ಕಾಲೇಜಿನ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ಊಟ ಮತ್ತು ವಸತಿ | ಹೊಸದುರ್ಗ ಸ್ಥಳೀಯ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ. |
| ತರಬೇಕಾದ ಸಾಮಾಗ್ರಿಗಳು | ಎ.ಪಿ.ಆರ್.ಒ ಭಾಗ 2 ಮತ್ತು 3ರ ನಿಯಮಾನುಸಾರ ಸಂಪೂರ್ಣ ಹಾಗೂ ಸರಿಯಾದ ಸಮವಸ್ತ್ರ, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಅಗತ್ಯವಾದ ವೇಷಭೂಷಣಗಳು, ಪುಸ್ತಕ, ಪೆನ್, ಸ್ಲೀಪಿಂಗ್ ಬ್ಯಾಗ್, ಸ್ವೆಟರ್, ಛತ್ರಿ, ರೈನ್ ಕೋಟ್, ವೈಯಕ್ತಿಕ ಬಳಕೆಯ ಸ್ವಚ್ಛತಾ ಸಾಮಾಗ್ರಿಗಳು, ಪ್ರಥಮ ಚಿಕಿತ್ಸೆ ಕಿಟ್, ಇತ್ಯಾದಿ |
| ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | ಶ್ರೀ. ಯೋಗರಾಜ್, ಹೊಸದುರ್ಗ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಚಿತ್ರದುರ್ಗ – 944862505<br>ಶ್ರೀ. ದೇವರಾಜ್, ಪ್ರಭಾರಿ ಜಿಲ್ಲಾ ಆಯುಕ್ತರು(ಸ್ಕೌ), ಚಿತ್ರದುರ್ಗ – 8073038213<br>ಶ್ರೀಮತಿ ಮಂಜುಳ. ಸಿ, ರಾಜ್ಯ ಸಂಘಟನಾ ಆಯುಕ್ತರು(ಗೈ), ಕರ್ನಾಟಕ – 9482433516 |
| ಆನ್‌ಲೈನ್‌ನಲ್ಲಿ ನೊಂದಾವಣಿ | https://zfrmz.in/Eh0LqFl7v2Sicz5XGw2u |

ಆದ್ದರಿಂದ, ಮೇಲ್ಕಂಡ ಶಿಬಿರಕ್ಕೆ ತಮ್ಮ ಜಿಲ್ಲೆಯಿಂದ ಆಸಕ್ತ 4 ರೋವರ್ಸ್ ಮತ್ತು 4 ರೇಂಜರ್ಸ್‌ಗಳನ್ನು ನಿಯೋಜಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುತ್ತಿರುವ ರೋವರ್ಸ್-ರೇಂಜರ್ಸ್‌ಗಳ ವಿವರವನ್ನು ದಿನಾಂಕ:29.08.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ವಿನಂತಿಸಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ